# ಜಗಜ್ಜನನಿಯ ಕೃಪೆಗೆ ಪಾತ್ರಳಾದ ಮಹಾಭಕ್ತೆ

❑ ಪ್ರವ್ರಾಜಿಕಾ ಧರ್ಮಪ್ರಾಣಾ

**ಬದುಕಿನಲ್ಲಿ ತನಗೊದಗಿದ ದೌರ್ಭಾಗ್ಯವನ್ನೇ ಸಾಧನೆಗೆ ಅನುಕೂಲವಾಗಿ ಪರಿವರ್ತಿಸಿಕೊಂಡು ಮಹಾಮಾತೆ ಶ್ರೀಶಾರದಾದೇವಿಯವರ ಕೃಪೆಗೆ ಪಾತ್ರಳಾಗಿ ಧನ್ಯಳಾದ ಕ್ಷೀರೋದಾಬಾಲಾರವರ ಒಂದು ಸಂಕ್ಷಿಪ್ತ ಚಿತ್ರಣವನ್ನು ಕೊಟ್ಟಿರುವ ಪ್ರವ್ರಾಜಿಕಾ ಧರ್ಮಪ್ರಾಣಾ ಅವರು ಅರುಣಾಚಲಪ್ರದೇಶದ ಖೋನ್ಸಾದಲ್ಲಿನ ರಾಮಕೃಷ್ಣಶಾರದಾ ಮಿಷನ್ನಿನ ಸಂನ್ಯಾಸಿನಿಯಾಗಿದ್ದಾರೆ.**

"ಮಗಳೆ, ನೀನು ತುಂಬ ದಿನಗಳಿಂದ ಉಪವಾಸ ವ್ರತಗಳನ್ನು ನಡೆಸಿದೆ. ಯಾವುದಕ್ಕೋಸ್ಕರ ಇವುಗಳನ್ನೆಲ್ಲ ಮಾಡಿದೆಯೋ ಅದು ಈಗ ನಿನಗೆ ಲಭಿಸಿದೆ. ಇನ್ನು ಈ ಕಠೋರ ತಪಸ್ಸಿನ ಅವಶ್ಯವಿಲ್ಲ. ನಾನು ನಿನ್ನನ್ನು ಅನುಗ್ರಹಿಸಿರುವೆನು. ನಾಳೆಯೇ ನಿನಗೆ ಮಂತ್ರದೀಕ್ಷೆಯನ್ನು ನೀಡುವೆನು." ಸಾಕ್ಷಾತ್ ಜಗಜ್ಜನನಿ ತನ್ನ ಭಕ್ತಳಿಗೆ ಈ ಅಭಯವನ್ನು ಕೊಡುತ್ತಿದ್ದಾಳೆ. ಯಾರು ಈ ಮಹಾ ಭಾಗ್ಯಶಾಲಿಯಾದ ಭಕ್ತೆ? ಅವರೇ ಬಾಲವಿಧವೆಯೂ, ಭಕ್ತೆಯೂ ಆದ ಕ್ಷೀರೋದಬಾಲಾರವರು—ತಮ್ಮ ಹತ್ತನೇ ವಯಸ್ಸಿನಲ್ಲಿ ಮದುವೆಯಾಗಿ ಹದಿನೈದನೇ ವಯಸ್ಸಿನಲ್ಲಿಯೇ ವಿಧವೆಯಾದವರು. ಅನಂತರ ದೀರ್ಘ ಹನ್ನೆರಡು ವರುಷಗಳು ತಮ್ಮ ಕುಟುಂಬದ ಪದ್ಧತಿಯಂತೆ ತಲೆಯನ್ನು ಮುಂಡನಗೊಳಿಸಿ ವ್ರತ ಪೂಜೆಗಳೊಂದಿಗೆ ಭಗವತ್ ಚಿಂತನೆಯಲ್ಲಿ ದಿನಗಳನ್ನು ಕಳೆದವರು.

ಸಿಲ್ಹೆಟ್ ಎಂಬ ಸ್ಥಳದ ನಿವಾಸಿಯಾದ ಇವರು ಕಲ್ಕತ್ತದ ಉದ್ಬೋಧನ ಅಥವಾ ಮಾತೃಮಂದಿರದಲ್ಲಿ ಇರುತ್ತಿದ್ದ ಶ್ರೀಮಾತೆ ಶಾರದಾದೇವಿಯವರ ಬಗ್ಗೆ ಕೇಳಿದರು. ಅವರ ದರ್ಶನ ಪಡೆಯಲು ತುಂಬ ಕಾತರರಾಗಿದ್ದರು. ಹಲವು ಬಾರಿ ಕಲ್ಕತ್ತ ನಗರಕ್ಕೆ ಬಂದರೂ ಶ್ರೀಮಾತೆಯವರನ್ನು ಕಾಣಲು ಅವರಿಗೆ ಸಾಧ್ಯವಾಗಿರಲಿಲ್ಲ. ಕಾಲ ಕೂಡಿಬರದಿದ್ದರೆ ಆ ಜಗಜ್ಜನನಿಯ ದರ್ಶನಲಾಭ ಸಾಧ್ಯವೇ? ತಾಯಿಯೆ ತನ್ನ ಅಪಾರ ಕೃಪೆ ತೋರಿದರೆ ಮಾತ್ರ ಅದು ಸಾಧ್ಯ. ಅಂತೆಯೇ ಹನ್ನೆರಡು ವರುಷಗಳ ನಂತರ ಆ ಸುದಿನ ಬಂತು. ಆ ದಿನ ಕ್ಷೀರೋದಬಾಲಾ ಶ್ರೀಮಾತೆಯವರ ದರ್ಶನಕ್ಕೆ ಹೋದರು. ಆಶ್ಚರ್ಯವೆಂದರೆ ಶ್ರೀಮಾತೆಯವರು ಇವರನ್ನೇ ಕಾಯುತ್ತಿರುವಂತೆ ಬಾಗಿಲಲ್ಲಿ ನಿಂತುಕೊಂಡು ತಮ್ಮ ಈ ಸಂತಾನವನ್ನು ಸ್ವಾಗತಿಸಿದರು.

ಜೀವನದಲ್ಲಿ ಉಂಟಾದ ದುಃಖದಿಂದಲೂ ಉಪವಾಸ ವ್ರತಗಳ ಕಠೋರ ಆಚರಣೆಯಿಂದಲೂ ಕ್ಷೀರೋದಬಾಲಾರ ಶರೀರವು ಕ್ಷೀಣವಾಗಿ ಅನಾರೋಗ್ಯದಿಂದಿತ್ತು. ಅಂದು ತುಂಬಾ ಸುಸ್ತಾಗಿಯೇ ಮಾತೆಯವರ ದರ್ಶನಕ್ಕೆ ಹೋಗಿದ್ದರು. ಯಾವ ಕಾರಣಕ್ಕೂ ತನ್ನನ್ನು ತಿರಸ್ಕರಿಸದೆ ತನ್ನ ಮಡಿಲಿಗೆ ಸ್ವೀಕರಿಸೆಂದು ಶ್ರೀಮಾತೆಯವರಲ್ಲಿ ಮೊರೆ ಹೋಗುತ್ತಾರೆ. ಶ್ರೀಮಾತೆ ಪ್ರಥಮವಾಗಿ ಅವರ ತಲೆಯ ಮೇಲೆ ಗಂಗಾಜಲವನ್ನು ಸಿಂಪಡಿಸಿ ಪ್ರಸಾದವನ್ನು ತಿನ್ನಲು ಕೊಟ್ಟು, ಅವರ ಶಾರೀರಿಕ ದಣಿವನ್ನು ಶಮನಗೊಳಿಸುತ್ತಾರೆ. ಆಮೇಲೆ ಅವರ ಜೀವನ ವೃತ್ತಾಂತವನ್ನು ಕೇಳಿ ಈ ಮೇಲಿನ ಮಾತಿನಲ್ಲಿ ಅಭಯದಾನ ಮಾಡಿದರು.

ಎಲ್ಲ ಸಾಧನೆಗಳ ಮೂಲ ಉದ್ದೇಶ ಇಷ್ಟದರ್ಶನ, ಆತ್ಮದರ್ಶನ. ಆ ಭಗವತ್‌ದರ್ಶನದ ನಂತರ ಈ ಸಾಧನೆಗಳ ಆವಶ್ಯಕತೆ ಏನು? ಕ್ಷೀರೋದಬಾಲಾರು ತಮ್ಮ ಜನ್ಮಜನ್ಮಾಂತರದ ಕರ್ಮಗಳ ಫಲವಾಗಿಯೂ ಈ ಜೀವಿತದ ಸಾಧನೆಗಳ ಫಲವಾಗಿಯೂ ನರರೂಪವನ್ನು ಧರಿಸಿದ ಆ ಸಾಕ್ಷಾತ್ ಲೋಕಜನನಿಯ ಮುಂದೆ ನಿಂತಿದ್ದಾರೆ. ಆ ಮಹಾಮಾತೆ ತಮ್ಮ ಮಾತುಗಳಿಂದಲೇ ಅವರಿಗೆ ಸ್ಪಷ್ಟವಾಗಿ ಹೇಳುತ್ತಿದ್ದಾರೆ, "ನೀನು ನನ್ನನ್ನು ಸಮೀಪಿಸಿರುವೆ. ಇನ್ನು ನಿನ್ನ ಕಠೋರ ವ್ರತ ನಿಯಮಗಳ ಅವಶ್ಯವಿಲ್ಲ" ಎಂದು. ನಿಜವಾಗಿಯೂ ಕ್ಷೀರೋದಬಾಲಾರು ಧನ್ಯರು. ಶ್ರೀಮಾತೆ ತಮ್ಮ ದಿವ್ಯರೂಪವನ್ನು ತೋರಿಸಿ ಅವರಿಗೆ ಮಂತ್ರದೀಕ್ಷೆಯನ್ನು ಕೊಟ್ಟು, ಈ ರೀತಿ ಅನುಗ್ರಹಿಸುತ್ತಾರೆ: "ಮಗು, ನೀನು ಭಯಪಡಬೇಡ. ನೀನು ಜನ್ಮಜನ್ಮಾಂತರದಲ್ಲಿ ಏನು ಮಾಡಿದ್ದೆಯೋ ಅದನ್ನೆಲ್ಲಾ ನಾನು ಸ್ವೀಕರಿಸಿದೆ. ಈಗ ನೀನು ಯಾವ ಪಾಪವೂ ಇಲ್ಲದ ಪವಿತ್ರಾತ್ಮಳು." ಈ ಅಭಯವಾಣಿಯಿಂದ ಸಕಲ ದುಃಖಗಳಿಂದ ಮುಕ್ತರಾದರು ಕ್ಷೀರೋದಬಾಲಾ. ಅವರೇ ಹೇಳುತ್ತಿದ್ದರು: "ಅಂದಿನಿಂದ ಆ ಮಹಾಮಾತೆ ವಿಶ್ವಜನನಿ ಇಷ್ಟದೇವಿಯಾಗಿಯೂ ಗುರುವಾಗಿಯೂ ರಾಜರಾಜೇಶ್ವರಿಯಾಗಿಯೂ ನನ್ನ ಮುಂದೆ ವಿರಾಜಿಸಿದರು. ನನಗಿನ್ನು ಪಡೆಯಲು ಏನು ಬಾಕಿ ಇದೆ? ನಾನು ಸಂಪೂರ್ಣ ಆನಂದಭರಿತಳಾಗಿದ್ದೇನೆ."

ಕ್ಷೀರೋದಬಾಲಾರು ವಿಧವೆಯಾಗಿದ್ದರೂ ಸುತ್ತಮುತ್ತಲು ಬಂಧುಬಾಂಧವರು ಇದ್ದಿದ್ದರಿಂದ ಅವರ ಜೊತೆಯಲ್ಲಿ ಸಂಸಾರ ಮಾಡಲೇಬೇಕಾಗಿತ್ತು. ಆದರೆ ಅವರ ಮನಸ್ಸು ಈ ಬಂಧನಗಳಿಂದ ಮುಕ್ತವಾಗಿ ಭಗವತ್‌ಚಿಂತನೆಯಲ್ಲೇ ಕಳೆಯಬೇಕೆಂದು ಕಾತರಗೊಂಡಿತ್ತು. ಒಂದು ದಿನ ತಮ್ಮ ಅಭಿಲಾಷೆಯನ್ನು ಶ್ರೀಮಾತೆಯವರಲ್ಲಿ ತೋಡಿಕೊಂಡರು. ಶ್ರೀಮಾತೆಯವರು ಈ ಬಾಲವಿಧವೆಯ ರಕ್ಷಣೆಯ ಭಾರವನ್ನು ಹೊತ್ತಿದ್ದರು. ಚಿಕ್ಕ ವಯಸ್ಸಿನಲ್ಲಿ ಅಲ್ಲಿ ಇಲ್ಲಿ ಸುತ್ತುವ ಬದಲು ಸಂಸಾರದಲ್ಲೇ ಇದ್ದು ಭಗವತ್ ಚಿಂತನೆಯನ್ನು ಮಾಡಲು ಸಲಹೆ ನೀಡುತ್ತಾರೆ. ತಮ್ಮ ವಾಸಸ್ಥಾನದ ಹತ್ತಿರದಲ್ಲೆ ವಾಸಿಸಿ ತಮ್ಮನ್ನು ನಿತ್ಯವೂ ಭೇಟಿ ಮಾಡಲು ಹೇಳುತ್ತಾರೆ. ಗೌರಿಮಾರವರ ಶಾಲೆಯಲ್ಲಿ ಕೆಲಸ ಮಾಡಲು ಇವರನ್ನು ಕೆಲವರು ಆಹ್ವಾನಿಸಿದಾಗ, ಶ್ರೀಮಾತೆ

ಯವರು ಅದನ್ನು ವಿರೋಧಿಸಿ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸದೆ ಶುದ್ಧ ಆಧ್ಯಾತ್ಮಿಕ ಜೀವನವನ್ನೇ ನಡೆಸಲು ಇವರಿಗೆ ಹೇಳುತ್ತಾರೆ. ತಮ್ಮ ಕಾಲ ಮೇಲೆ ತಾವೇ ನಿಂತುಕೊಂಡು ಧೈರ್ಯವಾಗಿ ಸಮಾಜದಲ್ಲಿ ಜೀವಿಸಲು ಕ್ಷೀರೋದಬಾಲಾರನ್ನು ಶ್ರೀಮಾತೆಯವರು ತಯಾರು ಮಾಡುತ್ತಾರೆ. ಅದಕ್ಕೋಸ್ಕರ ಕೆಲವು ದಿನ ಕ್ಷೀರೋದಬಾಲಾರನ್ನು ರಾತ್ರಿ ಒಬ್ಬರೇ ಸುಧೀರಾ ದೇವಿಯವರ ಶಾಲೆ, ಗೌರಿಮಾರವರ ಶಾಲೆಗೆ ಭೇಟಿಕೊಡಲು ಹೇಳುತ್ತಾರೆ.

ಶ್ರೀಮಾತೆಯವರು ಕ್ಷೀರೋದಬಾಲಾರಿಗೆ ಬೇಕಾದುದನ್ನೆಲ್ಲಾ ತಾವೇ ಒದಗಿಸಿ ಅವರನ್ನು ಆಧ್ಯಾತ್ಮಿಕ ಜೀವನದಲ್ಲಿ ಕೈಹಿಡಿದು ನಡೆಸುತ್ತಾರೆ. ಕ್ಷೀರೋದಬಾಲಾರು ಒಂದು ಉತ್ತಮ ಸಾಧಕಿಯಾಗಿದ್ದರು. ಅವರ ಉದ್ದೇಶ ಒಂದೇ : ಅದು ಭಗವಂತನನ್ನು ಪಡೆಯುವುದು. ಇವರ ವ್ಯಾಕುಲತೆಯನ್ನು ಅರಿತ ಶ್ರೀಮಾತೆ ಇವರನ್ನು ಸಾಧನಪಥದಲ್ಲಿ ಮುಂದುವರಿಸುತ್ತಾರೆ. ಆಗಾಗ ತಮ್ಮ ಅಭಯವಾಣಿಯನ್ನು ಹೀಗೆಂದು ನೀಡುತ್ತಿದ್ದರು: "ನೀನು ಭಯಪಡಬೇಡ. ಠಾಕೂರ್ ನಿನ್ನ ಕೈಹಿಡಿದು ಕರೆದುಕೊಂಡು ಹೋಗುತ್ತಾರೆ." ಇದರಿಂದ ಕ್ಷೀರೋದಬಾಲಾ ನಿರ್ಭಯರಾದರು. ಯಾವ ಭೋಗಲಾಲಸೆಯೂ ಇವರಿಗಿರಲಿಲ್ಲ. ತುಂಬ ಸರಳವಾದ ಜೀವನದೊಂದಿಗೆ ಆನಂದದಿಂದಲೇ ಶ್ರೀಮಾತೆಯವರ ಸನ್ನಿಧಿಯಲ್ಲಿ ಕಳೆದರು.

ಶ್ರೀಮಾತೆ ಶಾರದಾದೇವಿಯವರು ತಮ್ಮ ದಿವ್ಯಶಕ್ತಿಯನ್ನು ಕ್ಷೀರೋದಬಾಲಾರ ಮುಂದೆ ಅನೇಕ ರೀತಿಯಲ್ಲಿ ತೋರಿಸಿದ್ದರು. ಇವರು ವಿಧವೆ ಆಗುವ ಮುನ್ನ ಒಂದು ದಿನ ಪಪ್ಪಾಯಿಯನ್ನು ಹಚ್ಚುವಾಗ ಅದರ ಸೊನೆಯಿಂದ ಕೈಯ ಚರ್ಮವೆಲ್ಲ ಸುಟ್ಟು ಒಂದು ತರಹ ಚರ್ಮರೋಗವು ಪ್ರಾರಂಭವಾಗಿತ್ತು. ತಾವು ಅನೇಕ ತರಹ ಔಷಧಿಗಳನ್ನು ತೆಗೆದುಕೊಂಡೂ ವಾಸಿಯಾಗಿರಲಿಲ್ಲ. ಶ್ರೀಮಾತೆಯವರ ಸನ್ನಿಧಿಗೆ ಬರುವವರೆಗೂ ಈ ಕಾಯಿಲೆ ಇತ್ತು. ಕೆಲವು ಸಲ ಈ ರೋಗವು ಜಾಸ್ತಿಯಾಗುತ್ತಿತ್ತು. ಒಮ್ಮೆ ಈ ರೀತಿ ರೋಗವು ಉಲ್ಬಣವಾದ ಸಂದರ್ಭದಲ್ಲಿ ಶ್ರೀಮಾತೆಯವರ ದರ್ಶನಕ್ಕೆ ಹೋದಾಗ ಮಾತೆಯ ಪಾದಸ್ಪರ್ಶ ಮಾಡಲು ಹಿಂಜರಿದರು. ಏಕೆಂದರೆ ಶ್ರೀಮಾತೆಯವರಿಗೆ ಗೊತ್ತಾದರೆ ಅವರಿಗೆ ದುಃಖವಾಗಬಹುದೆಂದು. ಇನ್ನೊಬ್ಬ ಮಹಿಳೆ ತಾನು ಸೀರೆಯ ತುದಿಯಿಂದ ಕೈಯನ್ನು ಮುಚ್ಚಿ ಶ್ರೀಮಾತೆಯವರ ಪಾದಸ್ಪರ್ಶಿಸಿ ನಮಸ್ಕರಿಸುದುದನ್ನು ಕಂಡು ತಾವೂ ತಮ್ಮ ಕೈಯನ್ನು ಸೀರೆಯ ತುದಿಯಿಂದ ಮುಚ್ಚಿ ನಮಸ್ಕರಿಸಿದರು. ಎಂದೂ ಇಲ್ಲದ ಈ ನಡವಳಿಕೆಯನ್ನು ಕಂಡು ಶ್ರೀಮಾತೆಯವರು ಕಾರಣವನ್ನು ಕೇಳಿದರು. ಇಷ್ಟು ವರ್ಷಗಳಿಂದ ನರಳುತ್ತಿದ್ದರೂ ತಾವು ಈ ರೋಗದ ಬಗ್ಗೆ ಅರಿಯದಿದ್ದಕ್ಕೆ ದುಃಖಿಸಿದರು. ದೇವರ ಮನೆಯಿಂದ ಚರಣಾಮೃತವನ್ನು ತೆಗೆದುಕೊಂಡು ಬಂದು ಅದರಲ್ಲಿ ತನ್ನ ಕೈಯನ್ನು ಅದ್ದಲು ಕ್ಷೀರೋದಬಾಲಾಳಿಗೆ ಹೇಳಿದರು. ಅಂದು ಅದ್ಭುತ ಪವಾಡವೇ ನಡೆಯಿತು. ಹಲವು ವರ್ಷಗಳಿಂದ ಇದ್ದ ಆ ರೋಗವು ಆ ಕ್ಷಣದಲ್ಲಿಯೆ ಕಡಿಮೆ ಆಯಿತು. ದಿನವೂ ಚರಣಾಮೃತದಲ್ಲಿ ಕೈಯನ್ನು ಮುಳುಗಿಸಲು ನಿರ್ದೇಶಿಸುತ್ತಾರೆ ಶ್ರೀಮಾತೆಯವರು. ಕ್ಷೀರೋದಬಾಲಾರು ಈ ರೋಗದಿಂದ ಸಂಪೂರ್ಣವಾಗಿ ಮುಕ್ತರಾಗುತ್ತಾರೆ. ಸಾಧಾರಣ ಸ್ತ್ರೀಯಂತೆ ಎಲ್ಲರೊಂದಿಗೆ ಇದ್ದರೂ ಶ್ರೀಮಾತೆ ಆಗಾಗ ಈ ರೀತಿ ತಮ್ಮ ದೈವೀ ಶಕ್ತಿಯನ್ನು ಪ್ರಕಟಿಸಿದ್ದರು.

ಇನ್ನೊಂದು ದಿನ ಕ್ಷೀರೋದಬಾಲರ ಸಹೋದರನಿಗೆ ಯಾವುದೋ ರೋಗ ಬಂದು ದೊಡ್ಡ ಶಸ್ತ್ರಚಿಕಿತ್ಸೆ ನಡೆಸಬೇಕಾಯಿತು. ಆದರೂ ಬದುಕುವುದು ಸಂದೇಹವೆಂದು ಡಾಕ್ಟರ್ ಹೇಳುತ್ತಾರೆ. ಕ್ಷೀರೋದಬಾಲ ಶ್ರೀಮಾತೆಯವರಲ್ಲಿ ತಮ್ಮ ಕಷ್ಟವನ್ನು ಹೇಳಿಕೊಂಡು ಮೊರೆಯಿಡುತ್ತಾರೆ. ಸಹೋದರ ಸತ್ತುಹೋದರೆ ಸಂಸಾರದ ಭಾರ ತಮ್ಮ ಮೇಲೆ ಬಂದು ತಾವು ಸಂಸಾರದಲ್ಲಿ ಮುಳುಗಿಹೋಗಬೇಕಾಗುತ್ತದೆಂದು ಹೇಳಿ ತಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಾರೆ. ಶ್ರೀಮಾತೆಯವರ ಅನುಗ್ರಹದಿಂದ ಅವರ ಸಹೋದರನು ರೋಗದಿಂದ ಮುಕ್ತನಾಗಿ ಮನೆಗೆ ಹಿಂದಿರುಗುತ್ತಾನೆ. ಸಾಧಕರು ನಿಜವಾಗಿಯೂ ಪ್ರಾಮಾಣಿಕರಾಗಿದ್ದರೆ ಮಹಾಮಾಯೆ ಅವರ ಸಾಧನಮಾರ್ಗದ ಎಲ್ಲ ವಿಘ್ನಗಳನ್ನು ಪರಿಹರಿಸಿ ಮಾರ್ಗವನ್ನು ಸುಗಮ ಮಾಡುತ್ತಾಳೆ ಎಂದು ಇದರಿಂದ ತಿಳಿಯುವುದು. ಮತ್ತೊಂದು ಸಲ, ಕ್ಷೀರೋದಬಾಲಾರು ಅನಾರೋಗ್ಯದಿಂದಿರುವಾಗ ಶ್ರೀಮಾತೆ ಅವರನ್ನು ಕಾಶಿಗೆ ಕಳುಹಿಸಿ ಅವರ ಶುಶ್ರೂಷೆಗೆ ಏರ್ಪಾಡು ಮಾಡುತ್ತಾರೆ. ಅಲ್ಲಿ ಚೇತರಿಸಿಕೊಂಡ ಅವರು ಕಲ್ಕತ್ತೆಗೆ ಹಿಂದಿರುಗಿ ಮಾತೃಸಾನ್ನಿಧ್ಯವನ್ನು ಮತ್ತೆ ಪಡೆಯುತ್ತಾರೆ.

ಶ್ರೀಮಾತೆ ಶಾರದಾದೇವಿಯವರ ಹತ್ತಿರ ಅನೇಕ ತರಹದ ಮಹಿಳೆಯರು ಬರುತ್ತಿದ್ದರು. ಎಲ್ಲರಿಗೂ ಅವರವರ ಸಂಸ್ಕಾರಕ್ಕೆ ತಕ್ಕಂತೆ ಶ್ರೀಮಾತೆ ಉಪದೇಶಗಳನ್ನಿತ್ತು, ಉಳಿದ ಅನೇಕ ರೀತಿಯಲ್ಲಿ ಸಹಾಯವನ್ನು ನೀಡುತ್ತಿದ್ದರು. ಶ್ರೀಮಾತೆಯವರು ತಾವೇ ಕ್ಷೀರೋದಬಾಲಾರ ಕೈಹಿಡಿದು ಆಧ್ಯಾತ್ಮಿಕ ಪಥದಲ್ಲಿ ನಡೆಸಿದರು. ಆ ಜಗಜ್ಜನನಿಯ ಅಪಾರ ಕೃಪೆಗೆ ಪಾತ್ರರಾದ ಅವರು ಜನನ ಮರಣಗಳಿಂದ ಮುಕ್ತರಾಗಿ ಶ್ರೀಮಾತೆಯವರ ಚರಣಗಳಲ್ಲಿ ಐಕ್ಯವಾಗಿರುವುದರಲ್ಲಿ ಸಂದೇಹವಿಲ್ಲ. ◆

**ಆಶ್ರಮದ ಕಾರ್ಯಕ್ರಮಗಳು**

**ಜನವರಿ ೨೦೦೪**

| | | |
|---|---|---|
| ಕಲ್ಪತರು ದಿವಸ | ೧ | ಗುರುವಾರ |
| ಏಕಾದಶಿ | ೩ | ಶನಿವಾರ |
| ತುರೀಯಾನಂದ ಜಯಂತಿ | ೬ | ಮಂಗಳವಾರ |
| ವಿವೇಕಾನಂದ ಜಯಂತಿ | ೧೪ | ಬುಧವಾರ |
| ಏಕಾದಶಿ | ೧೮ | ಭಾನುವಾರ |
| ಬ್ರಹ್ಮಾನಂದ ಜಯಂತಿ | ೨೩ | ಶುಕ್ರವಾರ |
| ತ್ರಿಗುಣಾತೀತಾನಂದ ಜಯಂತಿ | ೨೫ | ಭಾನುವಾರ |